# ಬ್ಲಾಕ್ ಎಂಬ್ರಾಯಡರಿ



ಮನೆಯ ಅಲಂಕಾರದಿಂದ ಹಿಡಿದು ಸುಂದರವಾದ ಬಟ್ಟೆ, ಮತ್ತು ಅಸ್ಸೆಸರಿವರೆಗೂ ಎಲ್ಲದರಲ್ಲೂ ಹೊಂದುತ್ತದೆ. ನೀವು ಈ ತರಹದ್ದನ್ನು ಮಾಡಲು ಯೋಚಿಸುತ್ತಿರುವಿರಾದರೆ, ನೀವೆ ಯಾಕೆ ಮಾಡಬಾರದು?




**ವಸ್ತುಗಳ ವಿವರ**

ಮಷೀನಿನ ದೊಡ್ಡ ಹೂಪ್
ಹೂಪ್ ಗಿಂತ ಒಂದು ಇಂಚು ದೊಡ್ಡದಾದ ಬಿಳಿ ಬಣ್ಣ ಹೋಲುವಂತ ಬಟ್ಟೆ
5.5 ಇಂಚು x 5.5 ಇಂಚು ವ್ಯಾಡಿಂಗ್ ಪೀಸ್ ನಿಮ್ಮ ಹೂಪಿಗೆ ಫಿಟ್ ಆಗುವಂತದ್ದು
5.5 ಇಂಚು x 5.5 ಇಂಚು ಸ್ಯಾಟಿನ್ ಬಟ್ಟೆ ನಿಮ್ಮ ಹೂಪ್ ಸೈಜ್ ಗೆ ಫಿಟ್ ಆಗುವಂತದ್ದು
ಗ್ಲಾಸ್ ನೈಲಾನ್ ಅಥವಾ ಆರ್ಗಾಂಜಾ ಬಟ್ಟೆ ಹೂಪ್ ಗಿಂತ 1 ಇಂಚು ದೊಡ್ಡದು.
2 ಬೇರೆ ಬೇರೆ ಬಣ್ಣದ ದಾರ
ಎಂಬ್ರಾಯಡರಿ ಕಟ್ ಮಾಡುವ ಕತ್ತರಿ.









ಎಂಬ್ರಾಯಡರಿ ಹೂಪನ್ನು ತೆಗೆದುಕೊಂಡು ಅನ್ ಲಾಕ್ ಮಾಡಿ ಒಳಗಿನ ಹೂಪನ್ನು ತೆಗೆಯಿರಿ. ಈಗ ಬಟ್ಟೆಯನ್ನು ಹೊರಗಿನ ಹೂಪಿನ ಮೇಲೆ ಇಟ್ಟು ನಂತರ ಒಳಗಿನ ಹೂಪಿನ್ನು ಇಡಬೇಕು. ಬಟ್ಟೆಯನ್ನು ಸರಿಯಾಗಿ ಯಾವುದೇ ಸುಕ್ಕಿಲ್ಲದಂತೆ ಎಳೆಯಿರಿ ಇದರಿಂದ ಎಂಬ್ರಾಯಡರಿ ಚೆನ್ನಾಗಿ ಬರುತ್ತೆ. ಈಗ ಹೂಪನ್ನು ಲಾಕ್ ಮಾಡಿ ಮತ್ತು ವೀಡಿಯೋದಲ್ಲಿ ತೋರಿಸಿರುವಂತೆ ಮ್ಯಾಗ್ನೆಟಿಕ್ ಕ್ಲಾಂಪನ್ನು ಫಿಕ್ಸ್ ಮಾಡಿ.




ಈಗ ಹೂಪನ್ನು ಊಷಾ ಜನೋಮ್ ಮೆಮೋರಿ ಕ್ರಾಫ್ಟ್ ಸ್ಕೈಲೈನ್ S9 ಸೀವಿಂಗ್ ಮಷೀನ್ಗೆ ಸೇರಿಸಿ. ಈಗ ಮಷೀನಿನ ಜೊತೆ ಬಂದಿರುವ ಸ್ಟೈಲಸನ್ನು ಟಚ್ ಸ್ಕ್ರೀನನ್ನು ಬಳಸಿ ಫೋಲ್ಡರ್ ಐಕಾನ್ ಕ್ಲಿಕ್ ಮಾಡಿ ಪ್ಯಾಟರ್ನ್ ಸೆಲೆಕ್ಟ್ ಮಾಡಿ.

ನಾವೀಗ ಮಾಡುತ್ತಿರುವ ಪ್ಯಾಟರ್ನ್ ಮಷೀನಿನಲ್ಲಿ ಈಗಾಗಲೇ ಡ್ರೈವ್ ನಿಂದ ಅಪ್ಲೋಡ್ ಮಾಡಲಾಗಿದೆ. ಆದರೆ ನೀವು ಸುಂದರವಾದ ನಿಮಗಿಷ್ಟವಾದ ಪ್ಯಾಟರ್ನನನ್ನು ಡಿಜಿಟೈಜ಼ರ್ ಸಾಫ್ಟ್ ವೇರನ್ನು ಬಳಸಿ ಸ್ರುಷ್ಟಿಸಬಹುದು.




ಸ್ಕ್ರೀನಿನ ಮೇಲೆ ನೀವು ಹೂಪಿನ ಹೆಸರು RE20a:170x200mm ಮತ್ತು ಡಿಜೈನ್ನಅಳತೆ 144x144mm ಯನ್ನು ಕಾಣಬಹುದು. ಇದು ಒಂದು ನಿಮಿಷಕ್ಕೆ 700 ಹೊಲಿಗೆ, ನಾವು ಎಷ್ಟು ಬಣ್ಣ ಉಪಯೋಗಿಸಿದ್ದೇವೆ ಮತ್ತು ಎಷ್ಟು ಸಮಯ ಎಂದು ತೋರಿಸುತ್ತದೆ. ಇದರಲ್ಲಿ 7 ನಿಮಿಷ.

ಎರಡು ಬಾರಿ ಬಣ್ಣವನ್ನು ಚೆಕ್ ಮಾಡಿ. ನೀವು ಉಪಯೋಗಿಸುವ ಬಣ್ಣ ಸರಿಯಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳಿ .






ಈಗ ವ್ಯಾಡಿಂಗ್ ಶೀಟನ್ನು ತೆಗೆದುಕೊಂಡು ಅದರ ಮೇಲೆ ಸ್ಯಾಟಿನ್ ಬಟ್ಟೆ ಇಡಬೇಕು. ಈ ಎರಡನ್ನೂ ಪ್ರೆಸ್ಸರ್ ಫುಟ್ಟಿನ ಮೇಲೆ ಮತ್ತು ಹೂಪಿನ ಮೇಲಿಡಬೇಕು. ಈಗ ಟಚ್‌ಸ್ಕ್ರೀನಿನಲ್ಲಿ ಟ್ರೇಸಿಂಗ್ ವಿತ್ ಟಾಕ್ ಸ್ಟಿಚನ್ನು ಆಯ್ಕೆಮಾಡಿ. ಇದು ಎಲ್ಲಾ ಮೂರು ಮೆಟೀರಿಯಲನ್ನೂ ಒಟ್ಟಿಗೆ ಟೆಂಪರರಿ ಸ್ಟಿಚ್ ನೊಂದಿಗೆ ಹಿಡಿದುಕ್ಕೊಳ್ಳುತ್ತದೆ ನಂತರ ಅದನ್ನು ಸುಲಭವಾಗಿ ತೆಗೆಯಬಹುದು.ಈಗ ಸ್ಟಾರ್ಟ್ ಬಟನ್ ಒತ್ತಿ ಮತ್ತು ಮಷೀನ್ ತನಷ್ಟಕ್ಕೆ ತಾನೆ ಹೊಲೆಯುವುದನ್ನು ನೋಡಿ. ಬಟ್ಟೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೀರಾ ಎಂದು ಖಾತ್ರಿಪಡಿಸಿಕೊಳ್ಳಿ







ಇದು ಮುಗಿದ ನಂತರ, ಟ್ಯಕ್ಟ್ ಸ್ಟಿಚ್ ಮೆನು ಕ್ಲೋಸ್ ಮಾಡಿ ಮತ್ತು ಪ್ಯಾಟರ್ನ್ ಸ್ಕ್ರೀನಿಗೆ ಹಿಂತಿರುಗಿ. ಈಗ ಹಂತ ಒಂದರಿಂದ ಪ್ರಾರಂಭಿಸೋಣ. ಇದು ಫ್ಲೋರಲ್ ಡಿಜೈನ್ ಮಾಡುವಿದಾಗಿದೆ. ಸ್ಟಾರ್ಟ್ ಬಟನ್ ಪ್ರೆಸ್ ಮಾಡಿ ಮತ್ತು ಮಷೀನ್ ಅದರ ಮ್ಯಾಜಿಕ್ ಮಾಡುವುದನ್ನು ಗಮನಿಸಿ. ದಾರವನ್ನು ಕತ್ತರಿಸಿ. ಸ್ಟಾರ್ಟ್ ಬಟನ್ ಒತ್ತಿ. ನೀವು ಇದನ್ನು ಸ್ಕ್ರೀನಿನ ಮೇಲೂ ಕಾಣಬಹುದು. ಬಹಳ ಅನುಕೂಲಕರ ಅಲ್ಲವೇ?






ಮೊದಲ ಹಂತ ಮುಗಿದ ನಂತರ, ಮಷೀನ್ ಅದಾಗಿ ಅದೇ ನಿಲ್ಲುತ್ತದೆ. ಮುಂದಿನ ಹಂತಕ್ಕೆ, ಹೂಪನ್ನು ಅನ್ ಲಾಕ್ ಮಾಡಿ ಮತ್ತು ಮಷೀನಿನಿಂದ ತೆಗೆಯಿರಿ. ನಿಮಗೆ ಕಾಣುವಹಾಗೆ ಡಿಜೈನ್ ಅದ್ಭುತವಾಗಿ ಕಾಣುತ್ತದೆ. ಆದರೆ ಇದು ಇನ್ನೂ ಪೂರ್ತಿಯಾಗಿಲ್ಲಾ. ನಾವು ಈಗ ಟಾಕ್ಟ್ ಸ್ಟಿಚಸನ್ನು ಬಿಚ್ಚಬೇಕು. ವೀಡಿಯೋದಲ್ಲಿ ತೋರಿಸಿರುವಂತೆ ಸ್ಟಿಚಸಲ್ಲಿ ಸಣ್ಣ ಕಟ್ ಮಾಡಿ ಅದನ್ನು ಹೊರಕ್ಕೆ ಎಳೆಯಿರಿ. ಇದಾದ ನಂತರ ನಾವು ಹೆಚ್ಚಾದ ಸ್ಯಾಟಿನ್ ಬಟ್ಟೆ ಮತ್ತು ವ್ಯಾಡಿಂಗನ್ನು ಎಂಬ್ರಾಯಡರಿಯ ಸುತ್ತ ಕತ್ತರಿಸಬೇಕು. ಹುಷಾರಾಗಿ ಕತ್ತರಿಸಿ, ಡಿಜೈನ್ ಮೇಲೆ ಕತ್ತರಿಸಬೇಡಿ. ಉತ್ತಮ ಫಲಿತಾಂಶಕ್ಕಾಗಿ ಎಂಬ್ರಾಯಡರಿ ಕತ್ತರಿಯನ್ನು ಉಪಯೋಗಿಸಿ. ಇದು ಸ್ವಲ್ಪ ಕಷ್ಟವಾಗಬಹುದು, ಆದರೆ ನಿಮ್ಮ ಕೈ ಭದ್ರವಾಗಿ ಹಿಡಿದುಕೊಳ್ಳಿ


ಕತ್ತರಿಸಿದ ನಂತರ ಗ್ಲಾಸ್ ನೈಲಾನ್ ಅಥವಾ ಆರ್ಗಾಂಜಾ ಬಟ್ಟೆಯನ್ನು ಸರಿಯಾದ ಜಾಗದಲ್ಲಿ ಎಂಬ್ರಾಯಡರಿಯ ಮೇಲಿಟ್ಟು ಮ್ಯಾಗ್ನೆಟಿಕ್ ಕ್ಲಾಂಪಿನಿಂದ ಭದ್ರಗೊಳಿಸಿ. ಈ ಬಟ್ಟೆಯ ಮೇಲೆ ನಾವು ಅದೇ ವಿಧಾನವನ್ನು ಪುನರಾವರ್ತಿಸಬೇಕು. ಹೂಪನ್ನು ಮತ್ತೆ ಪ್ರೆಸ್ಸರ್ ಫುಟ್ ಮೇಲೆ ಇಟ್ಟು ಲಾಕ್ ಮಾಡಿ. ಟಚ್‌ಸ್ಕ್ರೀನ್ ನಲ್ಲಿ ಕಲರ್ 1 ಅನ್ನು ಆಯ್ಕೆ ಮಾಡಿ ಸ್ಟಾರ್ಟ್ ಬಟನ್ ಒತ್ತಿ. ಎಂಬ್ರಾಯಡರಿ ಶುರುಮಾಡುವ ಮುನ್ನ ಹೆಚ್ಚುವರಿಯಾದ ದಾರವನ್ನು ಕತ್ತರಿಸಲು ಮರೆಯಬೇಡಿ.

ಫ್ಲವರ್ ಎಂಬ್ರಾಯಿಡರಿ ಮುಗಿದ ನಂತರ ಮಷೀನ್ ಅದಾಗದೇ ನಿಲ್ಲುತ್ತದೆ. ಈಗ ಮುಂದಿನ ಹಂತಕ್ಕೆ ಹೋಗುವ ಮುನ್ನ ನಿಮ್ಮ ಸರದಿ ದಾರದ ಬಣ್ಣವನ್ನು ಬದಲಾಯಿಸಲು. ಈಗ ಸ್ಟಾರ್ಟ್ ಬಟನ್ ಒತ್ತಿ ಮತ್ತು ಮಷೀನ್ ತನ್ನ ಕೆಲಸ ಮಾಡಲು ಬಿಡಿ.







ಹಂತ 3ಕ್ಕೆ ನಾವು ದಾರವನ್ನು ಮತ್ತೆ ಹಸಿರಿಗೆ ಬದಲಾಯಿಸೋಣ ಮತ್ತು ಮಷೀನ್ ಹೊರಗಿನ ಬಾರ್ಡರನ್ನು ಹೊಲೆಯುತ್ತದೆ. ಎಲ್ಲಾ ಹಂತ ಮುಗಿದ ನಂತರ ಹೂಪ್ ತೆಗೆಯುವ ಬಟನನ್ನು ಟಚ್ ಸ್ಕ್ರೀನ್ ಮೇಲೆ ಪ್ರೆಸ್ ಮಾಡಿ, ಎಂಬ್ರಾಯಡರಿ ಹೂಪನ್ನು ಅನ್ ಲಾಕ್ ಮಾಡಿ ಪ್ರೆಸ್ಸರ್ ಪ್ರೂಟ್ ಕೆಳಗಿನಿಂದ ಅದನ್ನು ತೆಗೆಯಿರಿ.

ಇದು ನೋಡಲು ತುಂಬಾ ಅದ್ಭುತವಾಗಿದೆ ಅಲ್ಲವೇ? ನಾವೀಗ ಇದನ್ನ ಮುಗಿಸುವ ಮುನ್ನ ಕೊನೆಯದಾಗಿ ಮ್ಯಾಗ್ನೆಟಿಕ್ ಕ್ಲಾಂಪನ್ನು ತೆಗೆಯೋಣ.

ನಾವು ಹೇಳಲ್ಲಿಲ್ಲವೇ, ಸುಂದರವಾದ ಪ್ಯಾಟರ್ನ್ 1–2–3 ಎಣಿಸಿದಂತೆ ಸುಲಭವೆಂದು. ನಾವು ಇದನ್ನೆ ಹೆಳಲು ಬಯಸಿದ್ದು. ಊಷಾ ಮೆಮೋರಿ ಕ್ರಾಫ್ಟ್ ರೇಂಜ್ ನಿಂದ ಎಂಬ್ರಾಯಡರಿ ಶ್ರಮವಿಲ್ಲದ ಹಾಗೂ ಮೋಜಿನ ಕೆಲಸವಾಗಿದೆ. ಈಗ ನೀವು ಸುಲಭವಾಗಿ ಈ ರೀತಿಯ ವಿಧವಿಧವಾದ ಬ್ಲಾಕ್ ಗಳನ್ನು ಹೊಲೆಯಬಹುದು ಮತ್ತು ಬೆಡ್ ಕವರ್, ಕ್ವಿಲ್ಟನ್ನು ಹೊಲೆದು ನಿಮ್ಮ ಮನೆಯ ನೋಟವನ್ನು ಬದಲಿಸಬಹುದು.